ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1346

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 24-12-2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ರೈತ ಸಿರಿಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ರೈತಸಿರಿ ಯೋಜನೆಯನ್ನು 2019-20 ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, 2019-20 ನೇ ಸಾಲಿನಲ್ಲಿ 49702 ಹಾಗೂ 2020-21ನೇ ಸಾಲಿನಲ್ಲಿ 10331 ರೈತರಿಗೆ ಪ್ರೋತ್ಸಾಹಧನ ವಿತರಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ)	ರೈತಸಿರಿ ಯೋಜನೆಯ ಅನ್ವಯ ಯಾವ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ; (ಕಳೆದ 3 ವರ್ಷಗಳ ವಿವರ ನೀಡುವುದು)	ರೈತಸಿರಿ ಯೋಜನೆಯಡಿ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳಿಗೆ ಉತ್ತೇಜನ ನೀಡಲಾಗುತ್ತಿದೆ.
ಇ)	ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಕಳೆದ 3 ವರ್ಷಗಳಲ್ಲಿ ಎಷ್ಟು ಬಗೆಯ ಪಾಲಿಮರ್ ಲೇಪಿತ ಬೀಜಗಳನ್ನು ರೈತರಿಗೆ ಒದಗಿಸಲಾಗಿದೆ; ಇದರ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಕಳೆದ 3 ವರ್ಷಗಳಲ್ಲಿ ಯಾವುದೇ ಬಗೆಯ ಪಾಲಿಮರ್ ಲೇಪಿತ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗಿರುವುದಿಲ್ಲ.

<table>
<tr>
<td>ಈ)</td>
<td>ರೈತರ ಹೊಲದ ಮಣ್ಣು ಮತ್ತು ನೀರಿನ ಪರೀಕ್ಷೆಗಾಗಿರುವ ಸಂಚಾರಿ ಘಟಕಗಳು ಕಳೆದ 3 ವರ್ಷಗಳಲ್ಲಿ ಎಷ್ಟು ರೈತರ ಹೊಲದ ಮಣ್ಣು ಮತ್ತು ನೀರಿನ ಪರೀಕ್ಷೆ ನಡೆಸಿವೆ? (ಜಿಲ್ಲಾವಾರು ವಿವರ ನೀಡುವುದು)</td>
<td>ರಾಜ್ಯದಲ್ಲಿ ಕೃಷಿ ಇಲಾಖೆಯ ಅಧೀನದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ಸಂಚಾರಿ ಮಣ್ಣು ಪರೀಕ್ಷಾ ವಾಹನವಿದ್ದು, ಈ ಜಿಲ್ಲೆಯಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿದೆ.
ಕಳೆದ 3 ವರ್ಷಗಳಲ್ಲಿ ಈ ವಾಹನದಿಂದ ರೈತರ ಹೊಲದ ಮಣ್ಣು ಮತ್ತು ನೀರಿನ ಪರೀಕ್ಷೆಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಈ ಕೆಳಕಂಡಂತೆ ನಡೆಸಲಾಗಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಮಣ್ಣು ಮಾದರಿಗಳ ಸಂಖ್ಯೆ</th><th>ನೀರಿನ ಮಾದರಿಗಳ ಸಂಖ್ಯೆ</th></tr>
<tr><td>1</td><td>2018-19</td><td>980</td><td>20</td></tr>
<tr><td>2</td><td>2019-20</td><td>960</td><td>25</td></tr>
<tr><td>3</td><td>2020-21</td><td>1050</td><td>15</td></tr>
<tr><td></td><td>ಒಟ್ಟು</td><td>2990</td><td>60</td></tr>
</table>
</td>
</tr>
</table>

ಸಂಖ್ಯೆ:AGRI-AML/266/2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

ಅನುಬಂಧ-I - 2019-20 ಹಾಗು 2020-21 ನೇ ಸಾಲಿನ ರೈತಸಿರಿ ಯೋಜನೆಡಿ ಜಿಲ್ಲಾವಾರು ಫಲಾನುಭವಿಗಳ ವಿವರ

ಕ್ರ. ಸಂ	ಜಿಲ್ಲೆ	2019-20	2020-21
1	ದಾವಣಗೆರೆ	1108	183
2	ಚಾಮರಾಜನಗರ	416	14
3	ಹಾಸನ	1540	288
4	ಹಾವೇರಿ	1547	853
5	ರಾಮನಗರ	279	0
6	ಧಾರವಾಡ	628	228
7	ಶಿವಮೊಗ್ಗ	15	0
8	ಯಾದಗಿರಿ	188	132
9	ಕೊಪ್ಪಳ	3537	1111
10	ವಿಜಯಪುರ	1062	131
11	ಉತ್ತರಕನ್ನಡ	50	0
12	ಕೋಲಾರ	1208	256
13	ಕಲಬುರ್ಗಿ	329	111
14	ಬೆಂಗಳೂರು ನಗರ	96	0
15	ಬೆಂಗಳೂರು ಗ್ರಾಮಾಂತರ	115	0
16	ಚಿಕ್ಕಮಗಳೂರು	2709	347
17	ಚಿಕ್ಕಬಳ್ಳಾಪುರ	769	295
18	ಗದಗ	565	7
19	ತುಮಕೂರು	9902	2120
20	ಬಳ್ಳಾರಿ	7142	1335
21	ಬೆಳಗಾವಿ	554	71
22	ಬೀದರ	225	0
23	ಚಿತ್ರದುರ್ಗ	13845	1526
24	ಮೈಸೂರು	249	1095
25	ಬಾಗಲಕೋಟೆ	561	26
26	ರಾಯಚೂರು	678	202
27	ಮಂಡ್ಯ	385	0
ಒಟ್ಟು		49702	10331

ಕೃಷಿ ನಿರ್ದೇಶಕರು